ಹೋಗಬೇಡ ಹೋದರೆ...... ನಮ್ಮನ್ನು ನಮ್ಮನ್ನೂ ಜೊತೆಗೆ ಕರೆದುಕೊಂಡು ಹೋಗು ಅಂದರೆ... ಕರೆದುಕೊಂಡು ಹೋಗಾಲಾಗುತ್ತದಯೇ?..... ಅವರ ಓದು... ಬರಹ... ಹಾಳಾಗುವುದಿಲ್ಲವೇ?...

ಯೋಚಿಸುತ್ತಾ ಕುಳಿತಷ್ಟು ಹೋಗಲಾಗುವುದಿಲ್ಲ... ಸುಮ್ಮನೆ ಹೊರಟು ಬಿಡಬೇಕು. ಕಳಚಿಕೊಳ್ಳುವುದು ಅಂದರೆ ಕೊಂಡಿ ಬಿಡಿಸಿ ಕೊಳ್ಳಲೇಬೇಕು..

ಹೋಗುತ್ತೇನೆ ಎಂದುಕೊಂಡರೆ ಹೊರಡಬೇಕು... ಸಂಪಾದಿಸುವವರೆಗೂ ಬದುಕಬೇಕಲ್ಲವೇ.. ಬಟ್ಟೆ, ದುಡ್ಡು.. ಎಲ್ಲಾ ತೊಗೊಂಡು ಹೋಗಬೇಕು..

ವಾರ್ಡ್‌ರೋಬ್ ಮೇಲಿದ್ದ ಸೂಟ್‌ಕೇಸ್ ಕೆಳಗೆ ಇಳಿಸಿದೆ. ಅದರ ಪಕ್ಕ ಕುಳಿತು ಪ್ರೀತಿಗೆ ನನ್ನ ಹೊಸ ಮೊಬೈಲಿನಿಂದ ಕರೆ ಮಾಡಿದೆ..

'ಹಲೋ...' ಗಡುಸಾಗಿ ಬಂದ ಅವಳ ದನಿ ಕೇಳಿದಾಗ ಉಗುಳು ನುಂಗಿದೆ.

'ಹಲೋ... ಪ್ರೀತಿ.... ನಾನು...'

'ಹಲೋ! ಏನೇ ಇಷ್ಟು ಹೊತ್ತಿನಲ್ಲಿ?... ವಿಶ್ವಾಸ್ ನಿನ್ನ ರಾಣಿ ಅಂತಲೇ ಕರಿತಾನೆ ಉತ್ಪ್ರೇಕ್ಷೆ ಏನಲ್ಲ ಬಿಡು... ನಿಮ್ಮ ಮನೆಗೆ ನೀನೇ ರಾಣಿ... ವಿಕ್ರಂ ಅವ್ರು ಮಂತ್ರಿ ಮುಖ್ಯಮಂತ್ರಿ ಅಂತೆಲ್ಲಾ ಆದಾಗ ನೀನು ರಾಜ್ಯಕ್ಕೆ ರಾಣಿ ನಮ್ಮನ್ನೆಲ್ಲಾ ಮರೆಯಬೇಡಮ್ಮ ಆಗ'– ನಕ್ಕಳು..

'ಪ್ರೀತಿ....'

ಇವಳು ನನ್ನ ಸ್ನೇಹಿತೆ..! ಅರ್ಥವೇ ಮಾಡಿಕೊಂಡಿಲ್ಲವಲ್ಲ ನನ್ನ... ಇವಳೊಂದಿಗೆ ಹೇಳುವುದು ಏನು...

'ಸರಿ.. ಸರಿ.. ಸಾರಿ.... ಹೇಳು.. ಇದು ಯಾವ ನಂಬರ್?... ಕೊನೆಗೂ ಮೊಬೈಲ್ ಫೋನ್ ತೊಗೊಂಡ್ಯಲ್ಲ... ನಂಬರ್ ಸ್ಟೋರ್ ಮಾಡಿಕೊಳ್ತೀನಿ...'

'ನೀನು ನಾಳೆ ಹೊರಡ್ತಾ ಇದ್ದಿ ಅಲ್ಲವೇ? ಮನೇಲಿ...' ನಿಧಾನವಾಗಿ ಶುರು ಮಾಡಿದೆ.. ಆದರೆ ಅವಳಿಗೆ ಕೇಳುವ ತಾಳ್ಮೆ ಎಲ್ಲಿ.....

'ಹೂಂ.. ಈಗ ಬೆಂಗಳೂರಿನಲ್ಲಿ ಮನೆ ಲಾಕ್ ಮಾಡಿ ಬಿಟ್ಟು ಹೋಗೋ ಹಾಗೇ ಇಲ್ಲ... ನಮ್ಮತ್ತೆ ಮಾವ ಬಂದು ಇರ್ತಾರೆ... ಈಗ ಶಿವ್ ಹೋಗಿದ್ದಾರೆ ಬಸ್‌ಸ್ಟ್ಯಾಂಡಿಗೆ ಅವರನ್ನ ಕರ್ಕೊಂಡು ಬರೋಕ್ಕೆ... ನಾನು ಅಡಿಗೆ ಮನೇಲಿ ಎಲ್ಲಾ ದಿನಸಿ, ಪುಡಿ ಸರಿಯಾಗಿ ಇಡಬೇಕು.... ತಮಾಷಿ ಅಂದ್ರೆ ನನ್ನ ಅಡಿಗೆ ಮನೆ ನಾನು ಇದ್ದಾಗಲೂ ಇಷ್ಟು ಅಚ್ಚುಕಟ್ಟಾಗಿ ಇರೊಲ್ಲ..... ಅತ್ತೆಗೋಸ್ಕರ ನೋಡು....... ಎಷ್ಟು ಎಫಿಷಿಯಂಟ್ ಆಗಿ ಸಿದ್ಧ ಮಾಡಿದ್ದೇನೆ... ಅಯ್ಯೊ ನಂದು ಬಿಡು.. ಫೋನ್ ಮಾಡಿದ್ದು ನೀನು ಹೇಳು ಏನು ಸಮಾಚಾರ...?'

'ಏನಿಲ್ಲ.. ನಾನು..' ಅವಳ ಅತ್ತೆ ಮಾವ ಬಂದಿರುತ್ತಾರೆ ಎಂದ ಮೇಲೆ ನಾನು ಹೋಗುವ ಹಾಗೆ ಇಲ್ಲ...

'ಇವತ್ತು ಸಂಜೆ ಟಿ.ವಿ ನ್ಯೂಸ್‌ನಲ್ಲಿ ನೋಡಿದೆ... ನಿನ್ನ ಹಸ್ಬೆಂಡ್ ವಿಕ್ರಂ ಮತ್ತು ಮುಖ್ಯಮಂತ್ರಿಗಳನ್ನು!... ಹೇ.... ನಿನ್ನ ಹಸ್ಬೆಂಡ್ ಮಧ್ವೇಲಿ ಹೇಗಿದ್ರೊ ಹಾಗೇ ಇದ್ದಾರಲ್ಲೇ.. ಅಷ್ಟೇ ಹ್ಯಾಂಡ್ಸಂ..! ನಿಮ್ಮ ಊರಿನ ಹೆಂಗಸರ ವೋಟುಗಳೆಲ್ಲಾ ಗ್ಯಾರಂಟಿ ಬಿಡು... ನಾಡಿದ್ದು ನಿಮ್ಮ ಊರಿಗೆ ಬರ್ತಾರಂತಲ್ಲ ಮುಖ್ಯಮಂತ್ರಿಗಳು... ಫಂಕ್ಷನ್ ಇದ್ಯ?.... ಕರೆಯೋಕ್ಕೆ ಫೋನ್ ಮಾಡಿದ್ಯಾ?'

'ಹೂಂ...'

'ಗೆದ್ದು ಸೆಲಬ್ರೇಟ್ ಮಾಡ್ತಿರಲ್ಲ... ಆ ಫಂಕ್ಷನ್‌ಗೆ ಬರ್ತೀನಿ... ಓ .. ಶಿವ್.. ಅವರಪ್ಪ ಅಮ್ಮ ಬಂದ್ರು ಅನ್ನಿಸುತ್ತೆ... ಫೋನ್ನಲ್ಲಿ ಮಾತಾಡ್ತಾ ಇದ್ರೆ ಮಿಸ್ಟೇಕ್ ಮಾಡಿಕೊಳ್ತಾರೆ... ಫೋನ್ ಇಡ್ಲಾ.. ವಿಷ್ ಮಿ ಹ್ಯಾಪಿ ಜರ್ನಿ ಪ್ಲೀಸ್...'

'ಹ್ಯಾಪಿ ಜರ್ನಿ... ಹ್ಯಾವ್ ಎ ನೈಸ್ ಟೈಂ ಪ್ರೀತಿ...' ಬಟನ್ ಒತ್ತಿ ಡಿಸ್ಕನೆಕ್ಟ್ ಮಾಡಿ ಸುಮ್ಮನೆ ಕುಳಿತೆ.

* * *

'ಇದೇನು ಸೂಟ್ ಕೇಸ್ ಕೆಳಗಿದೆ?' ಗಡಸು ದನಿ ಬೆಚ್ಚಿದೆ.

ಇವರು ಬಂದಿದ್ದು ಯಾವಾಗ?.. ಇಷ್ಟೊಂದು ಬೆಳಕು.. ಸಮಯವೆಷ್ಟೋ ಅಂಗೈಯಿಂದ ಕಣ್ಣು ಮುಚ್ಚಿಕೊಂಡೆ...

'ಓ... ಸಾರಿ...' ಒಂದು ಲೈಟ್ ಬಿಟ್ಟು ಮಿಕ್ಕಿದ್ದೆಲ್ಲಾ ಆರಿಸಿದರು...

'ಎಷ್ಟು ಟೈಂ?..... ಯಾವಾಗ ಬಂದ್ರಿ?'

'ಐದು ಗಂಟೆ!... ಈಗ ಬರ್ತಿದೀನಿ... ರಾತ್ರಿ ಯಾಕೆ ಡ್ರೈವ್ ಮಾಡಿದ್ದು ಅಂತ ಅಮ್ಮ ಹೇಳಿ ಆಗಿದೆ... ನೀನೂ ಶುರು ಮಾಡಬೇಡ... ಸೂಟ್‌ಕೇಸ್ ಯಾಕೆ ಆಚೆ ಇದೆ?'

ಮೊಬೈಲ್ ಫೋನನ್ನು ದಿಂಬಿನ ಕೆಳಗೆ ನೂಕಿದೆ.

'ಹೋಗು... ನಾಳೇನೇ ಹೋಗು ಬೇಕಾದ್ರೆ ಅಂದ್ರಲ್ಲಾ.. ಹೊರಡೋಣ ಅಂತ...' ಮೆಲ್ಲನೆ ಹೇಳಿದೆ. ಹೋಗಲು ತಾವಿಲ್ಲ... ಆದರೆ ಅದನ್ನು ಒಪ್ಪಿಕೊಳ್ಳಲು ಮನಸ್ಸಿಲ್ಲ.

ವಿಕ್ರಂ ಕಣ್ಣು ಕಿರಿದುಗೊಳಿಸಿ ನನ್ನತ್ತ ನೋಡಿದರು.

'ವ್ಹಾಟ್ ನಾನ್ಸೆನ್ಸ್...! ಎಲ್ಲಿಗೆ ಹೋಗ್ತ್ಯಾ?'

ಸೂಟ್‌ಕೇಸನ್ನು ಕಾಲಿಂದ ಒದ್ದು ನನ್ನ ಬಳಿ ಬಂದು ಕುಳಿತರು.

'ರಾತ್ರಿ... ಫೋರ್ ಅವರ್ಸ್ ಡ್ರೈವ್ ಮಾಡಿಕೊಂಡು ಮನೆಗೆ ಬಂದಿದ್ದೇನೆ... ಇದು ಬೇಕಾ? ಹೇಳು'

ತಲೆತಗ್ಗಿಸಿ ಸುಮ್ಮನೆ ಕುಳಿತೆ. ಯಾವ ತಪ್ಪೂ ಮಾಡದ ನನಗೆ ಅಪರಾಧಿ ಪ್ರಜ್ಞೆ ಯಾಕೆ?...

'ಎಲೆಕ್ಷನ್ ಆದ ಮೇಲೆ, ನೀವು ಗೆದ್ದ ಮೇಲೆ ಹೋಗ್ತೀನಿ ಅಂದಿದ್ಯಲ್ಲಾ?'

ನೆನಪಿದೆ ಅವರಿಗೆ!... ಅವರತ್ತ ನೋಡಿದೆ.

'ಅಂದೆ... ಆದರೆ...' ಉಗುಳು ನುಂಗಿದೆ.

'ಆದರೆ ಏನು?... ಮುಂದಿನ ತಿಂಗಳು ಹದಿನಾಲ್ಕಕ್ಕೆ ಎಲೆಕ್ಷನ್... ಡೇಟ್ ಅನೌನ್ಸ್ ಆಗಿದೆ. ನಾಳೆ ಹೋಮ ಮನೆಯಲ್ಲಿ ಮುಖ್ಯಮಂತ್ರಿಗಳು.. ಐದಾರು ಮಂದಿ ಮಂತ್ರಿಗಳು, ಏಳೆಂಟು ಮಂದಿ ಶಾಸಕರು ಬರ್ತಿದ್ದಾರೆ... ನಿಮ್ಮ ಮಿಸೆಸ್ ಎಲ್ಲಿ ಅಂತ ಕೇಳಲ್ವಾ ಅವ್ರು...'

ಉಗುಳು ನುಂಗಿದೆ.

'ಅವರೆಲ್ಲಾ ಕೇಳ್ತಾರೆ ಅಂತ...'

ಈಗಲೂ ಆಸೆ ನನಗೆ... ಯಾರು ಕೇಳಲಿ ಬಿಡಲಿ... ನೀನು ನನ್ನ ಜೊತೆ ಇರಬೇಕು. ಅದು ನನಗೆ ಬೇಕು... ಎಂದು ಇವರು ಹೇಳಲಿ... ನಿನ್ನ ಅವಶ್ಯಕತೆ ನನಗೆ ಇದೆ... ಎಂದು ಬಾಯಿಬಿಟ್ಟು ಹೇಳಲಿ...

'ಹೂಂ ಮತ್ತೆ... ಇಂಥ ಸುಂದರಿ ನನ್ನ ಹೆಂಡತಿ ಅಂತ ಅವರೆಲ್ಲರ ಮುಂದೆ ತೋರಿಸಿಕೊಳ್ಳುವುದು ಬೇಡವೇ? ಮುಖ್ಯಮಂತ್ರಿಗಳ ಹೆಂಡತಿ ಹೇಳಿದರಂತೆ... ಮಿಸೆಸ್ ವಿಕ್ರಂ ತುಂಬಾ ಚೆನ್ನಾಗಿದ್ದಾರೆ ಅಂತ...'

ಅರೆನಗೆ ನಕ್ಕೆ... ನನ್ನ ಸೌಂದರ್ಯದ ಬಗೆಗಿನ ವ್ಯಾಮೋಹ ನನಗೇ ತಗ್ಗಿದೆ.

'ಬೇಸರವೇ?... ಎಲೆಕ್ಷನ್ ಮುಗಿಯಲಿ... ಮೂರು ವಾರ ಅಮೆರಿಕಕ್ಕೆ ಹೋಗಿ ಅಲ್ಲಿ ಸುತ್ತಾಡಿಕೊಂಡು ಬರೋಣ... ಬೇಡವೇ?... ಎಲ್ಲಿಗೆ ಹೋಗೋಣ ಹೇಳು?'

ಊರು ನೋಡುವ, ಸುತ್ತಾಡುವ ಆಸೆ ನನಗೆ ಎಂದೂ ಇರಲೇ ಇಲ್ಲ...

'ಅದಕ್ಕೆ ಸ್ವಲ್ಪ ಪ್ಲ್ಯಾನಿಂಗ್ ಬೇಕು... ಇರಲಿ... ಎಲೆಕ್ಷನ್ ಆದ ತಕ್ಷಣ ದುಬೈಗೆ ಹೋಗಿ ಶಾಪಿಂಗ್ ಮಾಡೋಣ... ನಿಂಗೆ ಬೇಕಾದ್ದು ಕೊಡಿಸ್ತೀನಿ'

ನಂಗೆ ಬೇಕಿರುವುದು ಏನು?... ದುಬೈನಲ್ಲಿ ಸಿಗುವ ಬಂಗಾರದ ಒಡವೆಗಳೇ?... ದುಡ್ಡಿನಿಂದ ಸಿಗುವ ವಸ್ತುಗಳೇ?...

'ನನಗೆ ಜವಾಬ್ದಾರಿ ಇದೆ. ನೀನು ಇಲ್ಲದ್ದು ಯೋಚನೆ ಮಾಡಬೇಡ. ಈ ಎಲೆಕ್ಷನ್ ಆಗಲಿ. ಆಮೇಲೆ ಯೋಚಿಸೋಣ... ಅಮ್ಮಂಗೆ ಬಿ.ಪಿ. ಜಾಸ್ತಿ ಆಗಿದೆ. ನಾಳೆ ಮುಖ್ಯಮಂತ್ರಿಗಳು ಬರ್ತಿದ್ದಾರೆ... ಅವರ ಹೆಂಡತಿ ಕೂಡ ಬರಬಹುದು... ಈಗ ಹೋಗುವ ಯೋಚನೆ ಬೇಡ'

ಸೂಟ್‌ಕೇಸ್ ಎತ್ತಿ ಬೀರುವಿನ ಮೇಲೆ ಇಟ್ಟರು.

'ನಂಗೆ ಬಿಸಿಯಾಗಿ ಒಂದು ಲೋಟ ಹಾಲು ತಂದುಕೊಡು... ಕುಡಿದು ಸ್ವಲ್ಪ ಹೊತ್ತು ಮಲಗ್ತೀನಿ'

ಅವರು ಉತ್ತರಕ್ಕೆ ಕಾಯಲಿಲ್ಲ... ನನಗೆ... ಮುಂದೆ ಪ್ರಶ್ನಿಸುವ, ವಿರೋಧಿಸುವ ಶಕ್ತಿ ಇಲ್ಲ... ಬಿಟ್ಟರೆ ನಿಲ್ಲಲು ತಾಣವೇ ಇಲ್ಲ...

ಮೆಲ್ಲನೆ ಕೋಣೆಯಿಂದ ಹೊರ ಬಂದೆ.

ನನಗೆ ಜವಾಬ್ದಾರಿ ಇದೆ. ನಾನು ನೋಡಿಕೊಳ್ತೀನಿ ಅಂತಾರೆ... ಆದರೆ ನನಗೆ ನನ್ನ ಯಾರೂ ನೋಡಿಕೊಳ್ಳುವುದು ಬೇಡ, ಆದರೆ ಧಿಕ್ಕರಿಸಿ ಹೋಗುವುದು ಸುಲಭವಲ್ಲ... ಬೆಳೆದಿರುವ ರೀತಿ ಇದೆಯಲ್ಲ... ಅದೇ ಪ್ರಾಬ್ಲಂ...

* * *

(ಸಶೇಷ)